ನಾಗರಾಜು ಹಾವೇರಿ – ಪಲ್ಲವೀಪ್ರಿಯ – ಬೆಂಗಳೂರು 99010 52578

# ಶ್ರೀ ಗಣೇಶ ಸ್ತುತಿ

ಕರಸ್ಥಬೀಜಪೂರಾಕ್ತಶುಂಡಾದಂಡ ಪಿಚಂಡಿಲ ।
ವಿಘ್ನಾದಿರಾಜ ಹಸ್ತೀಂದ್ರ ಮಸ್ತಕಾಯಾಸ್ತು ತೇ ನಮಃ ॥
ಹೇರಂಬ ಕುಂಭಲಸೀತಾಮಲ ಕುಂಕುಮಾಂಕ
ಮಾರಾದಿಪುತ್ರ ಕರಿವಕ್ತ್ರ ಪವಿತ್ರಗಾತ್ರ ।
ಕಾರುಣ್ಯರೂಪ ಸುಕಲಾಪ ಮಹಾಪ್ರತಾಪ
ಪ್ರಾರಬ್ಧಕಾರ್ಯ ಮುರುಧ್ಯೈರ್ಯ ಭವೇದವಿಘ್ನಮ್ ॥

ಶ್ರೀವಾದಿರಾಜರು

ಗೋಕರ್ಣದಲ್ಲಿ ಮಹಾಬಲೇಶ್ವರನ ಎಡಭಾಗದಲ್ಲಿರುವ ಶ್ರೀವಿಘ್ನೇಶನನ್ನು ಶ್ರೀವಾದಿರಾಜರು ಈ ಶ್ಲೋಕದಲ್ಲಿ ಸ್ತುತಿಸಿದ್ದಾರೆ. ಶ್ರೀವಿಘ್ನೇಶ್ವರನು ರಾವಣನ ಇಚ್ಛೆಗೆ ಪ್ರತಿಕೂಲವನ್ನು, ದೇವತೆಗಳ ಇಚ್ಛೆಗೆ ಅನುಕೂಲವನ್ನು ಉಂಟುಮಾಡಿದ್ದರಿಂದ ಆತನು ದುರ್ಜನರಿಗೆ ವಿಘ್ನಪ್ರಾಪಕನೂ, ಸಜ್ಜನರಿಗೆ ವಿಘ್ನನಾಶಕನೂ ಆಗಿರುವುದರಿಂದಲೇ ಆತನು ವಿಘ್ನೇಶ್ವರನೆಂದು ಪ್ರಸಿದ್ಧನಾಗಿರುವನು ಎಂಬ ತತ್ವವನ್ನು ಆತನೇ ಸ್ವತಃ ಹೇಳಿದ್ದಾನೆ. ಇಂತಹ ವಿಘ್ನೇಶ್ವರನು ನಮಗೆ ಸದಾ ಹೆಚ್ಚು ಶ್ರೇಯಸ್ಸನ್ನು ಕರುಣಿಸಲೀ ಎಂದು ಈ ಶ್ಲೋಕದ ಅಭಿಪ್ರಾಯ.

ದುಷ್ಟಾನಾಂ ವಿಘ್ನಕರ್ತಾ ಸುಚರಿತಸುಜನಸ್ತೋಮವಿಘ್ನಾಪಹರ್ತಾ
ತಸ್ಮಾದ್ವಿಘ್ನಾಧಿಪೋಽಹಂ ಮತ ಇತಿ ಸುಧೀಯಾಂ ಸ್ಪಷ್ಟಮಾಜ್ಞಾಪನಾಯ ।
ಪೌಲಸ್ತ್ಯೇಚ್ಛಾಂತರಾಯಃ ಸುರಮುನಿನಿಕರಾಭೀಷ್ಟಸಂಪ್ರಾಪ್ತ್ಯುಪಾಯಃ
ಶ್ರೇಯೋ ವಿಘ್ನಾಧಿರಾಜಃ ಪ್ರದಿಶತು ಸತತಂ ಭೂರಿ ಗೌರೀತನೂಜಃ ॥

ತೀರ್ಥಪ್ರಬಂಧ

ಆಯುಷ್ಕಾಮಾರ್ಥಸಿದ್ಧಿಗೋಸ್ಕರ ಗೌರೀಪುತ್ರನಾದ ಗಣಪತಿಯನ್ನು ಭಕ್ತಿಯಿಂದ ನಮಸ್ಕರಿಸಿ ಈ ದ್ವಾದಶನಾಮವನ್ನು ತ್ರಿಕಾಲಗಳಲ್ಲಿ ಯಾರು ಪಠಿಸುವರೋ ಅವರು ವಿದ್ಯಾರ್ಥಿಯಾಗಿದ್ದರೇ ವಿದ್ಯೆಯನ್ನು, ಧನಾರ್ಥಿಯಾಗಿದ್ದರೇ ಧನವನ್ನು ಪಡೆಯುತ್ತಾನೆ.

ನಮಾಮಿ ಶಿರಸಾದೇವಂ ಗೌರೀಪುತ್ರಂ ವಿನಾಯಕಮ್
ಭಕ್ತ್ಯಾ ಯಃ ಸಂಸ್ಮರೇನಿತ್ಯಂ ಆಯುಷ್ಕಾಮಾರ್ಥ ಸಿದ್ಧಯೇ ॥ 1 ॥
ಪ್ರಥಮಂ ವಕ್ರತುಂಡಂ ತು ಹ್ಯೇಕದಂತಂ ದ್ವಿತೀಯಕಂ
ತೃತೀಯಂ ಕೃಷ್ಣಪಿಂಗಂ ಚ ಚತುರ್ಥಂ ಗಜಕರ್ಣಕಮ್ ॥ 2 ॥
ಲಂಬೋದರಂ ಪಂಚಮಂ ಚ ಷಷ್ಠಂ ವಿಕಟಮೇವಚ
ಸಪ್ತಮಂ ವಿಘ್ನರಾಜೇಂದ್ರಂ ಧೂಮ್ರವರ್ಣಂ ತಥಾಷ್ಟಮಮ್ ॥ 3 ॥
ನವಮಂ ಫಾಲಚಂದ್ರಂ ತು ದಶಮಂ ಚ ವಿನಾಯಕಂ
ಏಕಾದಶಂ ಗಣಪತಿಂ ದ್ವಾದಶಂ ಹಸ್ತಿರಾಣ್ಮುಖಮ್ ॥ 4 ॥
ಏತದ್ವಾದಶ ನಾಮಾನಿ ತ್ರಿಸಂಧ್ಯಂ ಯಃ ಪಠೇನ್ನರಃ
ವಿದ್ಯಾರ್ಥಿ ಲಭತೇ ವಿದ್ಯಾಂ ಧನಾರ್ಥೀ ಲಭತೇ ಧನಮ್ ॥ 5 ॥

*ಕಡು ಕರುಣಿ ನೀನೆಂದರಿತು ಹೇರೊಡಲ ನಮಿಪೆ ನಿನ್ನಡಿಗೆ ನಡುನಡುವೆ ಬರುತಿಪ್ಪ ವಿಘ್ನವ ತಡೆದು ಭಗವನ್ನಾಮ ಕೀರ್ತನೆಯ ನುಡಿದು ನುಡಿಸೆನ್ನಿಂದ ಪ್ರತಿದಿವಸದಲ್ಲಿ – ಶ್ರೀವಿಘ್ನೇಶ್ವರಸಂಧಿ – ಶ್ರೀಜಗನ್ನಾಥದಾಸರು*

**ಜೀವನದಲ್ಲಿ ಬರುವ ಎಲ್ಲಾ ವಿಘ್ನಗಳನ್ನು ತಡೆದು ನಿರ್ವಿಘ್ನವನ್ನುಂಟು ಮಾಡಿ ಆಯುರಾರೋಗ್ಯಸೌಭಾಗ್ಯವನ್ನು ನಿಮಗೂ ಮತ್ತು ನಿಮ್ಮ ಕುಟುಂಬದವರಿಗೆ ಕೊಡಲೆಂದು ವಿಘ್ನೇಶ್ವರನನ್ನು ಬೇಡುತ್ತಾ ಗೌರೀ ಗಣೇಶ ಹಬ್ಬದ ಶುಭಾಶಯಗಳು.**